

"ನಾನೇನು ಸಹಾಯ ಮಾಡಲಿ ಸರ್."

"ನೋಡಿಲ್ಲಿ. ಇದರಲ್ಲಿ ಇಲ್ಲಿಯವರೆಗೆ ನಡೆದ ಎಲ್ಲಾ ಘಟನೆಗಳ ಬಗ್ಗೆ ಡಾಕ್ಯುಮೆಂಟ್ಸ್ ಇವೆ. ಇವನ್ನು ನಾಲ್ಕು ಪ್ರತಿ ಮಾಡಿಕೋ. ಆಗ ಹೇಳಿದ ಮೂವರಿಗೆ ಮೂರು ಮತ್ತು ಇಂಡಿಯನ್ ಪ್ರೈಂ ಮಿನಿಸ್ಟರ್‌ಗೆ ಒಂದು ಕಳಿಸಿಕೊಡು. ಉತ್ತರ ಬಂದ ಮೇಲೆ ತಿಳಿಸು. ಎಲ್ಲಾ ಸರಿಯಾದರೆ ನಿನಗಿದು ವಿಂಡ್ ಫಾಲ್ ಗೈನ್. ಎಲ್ಲವೂ ನಿನ್ನ ಅದೃಷ್ಟವನ್ನು ಅವಲಂಬಿಸಿದೆ.''

ಡಾ. ಸೋನಿಪತ್ ಒಂದಷ್ಟು ಡಾಕ್ಯುಮೆಂಟ್‌ಗಳನ್ನು ತೆಗೆದು ಟೀಪಾಯಿ ಮೇಲಿಟ್ಟರು. ಬಳಿಕ ಎದ್ದು ನಿಂತರು. "ನನಗೆ ವಯಸ್ಸಾಯಿತು. ಒಬ್ಬನೇ ಹೋರಾಟ ಮಾಡಲಾರೆ. ಅದಕ್ಕೆ ನಿನ್ನ ಸಹಾಯವನ್ನು ಯಾಚಿಸುತ್ತಿದ್ದೇನೆ. ನನಗೆ ಬರಬೇಕಿರುವ ಕಾಂಪನ್‌ಸೇಷನ್ ಬಂದರೆ ಜಂಟಲ್‌ಮ್ಯಾನ್, ಗಾಡ್ ಪ್ರಾಮಿಸ್, ಅರ್ಧಾಂಶ ನಿನಗೇ" ಎಂದು ಕೈ ತಟ್ಟಿ ಭಾಷೆ ನೀಡಿದರು. ಆ ಬಳಿಕ ಕೈ ಕುಲುಕಿ 'ಥ್ಯಾಂಕ್ಯೂ' ಹೇಳಿ ಹೊರಟು ಹೋದರು.

ನಾನು ಕಾರ್ಯಪ್ರವೃತ್ತನಾಗಿ ಅವರು ಹೇಳಿದ ನಾಲ್ವರಿಗೂ ಪತ್ರ ಬರೆದು ಡಾ. ಸೋನಿಪತ್‌ರಿಗೆ ಸಲ್ಲಬೇಕಾದ ಒಂಬತ್ತು ಮಿಲಿಯನ್ ಪೌಂಡ್ ಕೊಡಿಸಿಕೊಡುವಂತೆ ವಿನಂತಿಸಿ ಉತ್ತರಕ್ಕಾಗಿ ಕಾಯತೊಡಗಿದೆ. ನಾನು ನಾಲ್ಕುವರೆ ಮಿಲಿಯನ್ ಪೌಂಡಿನ ಒಡೆಯನಾಗುವ ಕನಸು ಕಾಣತೊಡಗಿದೆ.

ಮೊದಲು ಉತ್ತರ ಬಂದದ್ದು ವಿಶ್ವ ಮಾನವ ಹಕ್ಕುಗಳ ಆಯೋಗದಿಂದ, "ಇದು ಬ್ರಿಟನ್ನಿನ ಆಂತರಿಕ ವಿಷಯ. ಇದರಲ್ಲಿ ಮಾನವ ಹಕ್ಕುಗಳ ಆಯೋಗ ಹಸ್ತಕ್ಷೇಪ ಮಾಡುವಂತಿಲ್ಲ".

ಬ್ರಿಟನ್ನಿನ ರಾಣಿಯ ಉತ್ತರ ತಕ್ಷಣ ಬಂತು. "ಇದು ನನ್ನ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ಆದರೂ ನಿನ್ನ ಪತ್ರವನ್ನು ಮುಂದಿನ ಕ್ರಮಕ್ಕೆಗೊಳ್ಳುವಂತೆ ನೋಟ್ ಹಾಕಿ ಪ್ರೈಂ ಮಿನಿಸ್ಟರಿಗೆ ಕಳುಹಿಸಿಕೊಟ್ಟಿದ್ದೇನೆ."

ಬ್ರಿಟನ್ನಿನ ಪ್ರೈಮಿನಿಸ್ಟರ್ ಕೂಡಾ ಉತ್ತರಿಸಿದ. "ಲೇಬರ್ ಕೋರ್ಟಿನಲ್ಲಿ ಡಾ. ಸೋನಿಪತ್‌ರ ಆಕ್ಷೇಪಕ್ಕೆ ಸೋಲುಂಟಾಗಿದೆ. ಅವರಿಗೆ ನ್ಯಾಯಬದ್ಧವಾದ ಪೆನ್‌ಶನ್ ಕೊಡುತ್ತಿದ್ದೇವೆ, ಬೇರೇನೂ ಬಾಕಿ ಉಳಿದಿರುವುದಿಲ್ಲ."

ಆರು ತಿಂಗಳ ಬಳಿಕ ಭಾರತದ ಪ್ರಧಾನಿಗಳ ಕಾರ್ಯಾಲಯದಿಂದ ಉತ್ತರ ಬಂತು. "ನೀವು ಇನ್ನಷ್ಟು ಸಾಕ್ಷ್ಯಾಧಾರ ಕಳುಹಿಸಿ ಕೊಟ್ಟರೆ ಪರಿಶೀಲಿಸಲಾಗುವುದು!"

ಡಾ. ಸೋನಿಪತ್ ನಮ್ಮೂರು ಬಿಟ್ಟು ಮೈಸೂರಿನಲ್ಲಿ ನೆಲೆಗೊಂಡಿದ್ದಾರೆ. ಆಲ್‌ಮೋಸ್ಟ್ ಬೆಡ್‌ರಿಡನ್. ಅವರೆಲ್ಲಾದರೂ ಏನಾಯಿತೆಂದು ಕೇಳಿದರೆ ಏನುತ್ತರ ಕೊಡಲಿ?


**ಬಿ. ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಕನ್ನಡದಲ್ಲಿ ಇನ್ನೂರಕ್ಕೂ ಹೆಚ್ಚು ಕತೆಗಳನ್ನು ಬರೆದಿದ್ದಾರೆ. ಕತೆಗಾರ ಮತ್ತು ಕಾದಂಬರಿಕಾರ. ಕನ್ನಡಕ್ಕೆ 220 ಕೃತಿಗಳನ್ನು ನೀಡಿದ ಹವ್ಯಾಸಿ ನಾಟಕಕಾರ ಮತ್ತು ಯಕ್ಷಗಾನ ಕಲಾವಿದ. ಇವರ 'ಪುಂಸ್ತ್ರೀ' ಕಾದಂಬರಿ 14 ಭಾಷೆಗಳಿಗೆ ಅನುವಾದವಾಗುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.